ಅಧ್ಯಕ್ಷರ ಸಂದೇಶ

ಸಹೋದ್ಯೋಗಿಗಳ ಜೊತೆಗಿನ ಒಡನಾಟ,

ಸಮಾಜದ ಜವಾಬ್ದಾರಿಗಳು, ಸಾಂಸಾರಿಕ ಜೀವನ ಇತರೆ ಜವಾಬ್ದಾರಿ ಎಂದಿಗೂ ಕೊನೆಗೊಳ್ಳುವುದಿಲ್ಲ. ಒಂದು ಹೊಸ ಅಧ್ಯಾಯವೇ ಪ್ರಾರಂಭವಾಗುತ್ತದೆ.

ಈ ಸಂಸ್ಮರಣೆ ಸಂಚಿಕೆಯು ಕೇವಲ, ಬರಹಗಳು ಮತ್ತು ಸಂದೇಶಗಳ, ಸಂಗ್ರಹವಲ್ಲ ಇದು. ನಮ್ಮ ಸಾಮೂಹಿಕ ಪಯಣ ಸಾಧನೆಗಳು, ನಮ್ಮ ಸ್ನೇಹ ಸಂಬಂಧಗಳು ಹಾಗೂ ನಮ್ಮ ಸದಸ್ಯರ ಅಮೂಲ್ಯ ಕೊಡುಗೆಗಳ ಪ್ರತಿಬಿಂಬವಾಗಿದೆ. ನಮ್ಮೊಂದಿಗೆ ಸೇವೆ ಸಲ್ಲಿಸಿ, ಇಂದು ನಮ್ಮ ನಡುವೆ ಇಲ್ಲದಿರುವ ಸಹೋದ್ಯೋಗಿಗಳನ್ನು ಸ್ಮರಿಸಿಕೊಳ್ಳಲು ಕೂಡ ಇದು ಒಂದು ಉತ್ತಮ ಅವಕಾಶವಾಗಿದೆ. ಈ ಸ್ಮರಣ ಸಂಚಿಕೆಯನ್ನು ಅರ್ಥಪೂರ್ಣವಾಗಿ ರೂಪಿಸಲು, ಲೇಖನಗಳು, ಛಾಯಾಚಿತ್ರಗಳು ನೆನಪುಗಳು ಹಾಗೂ ಅಮೂಲ್ಯ ಸಲಹೆಗಳನ್ನು ನಿಡಿದ ಎಲ್ಲಾ ಸದಸ್ಯರಿಗೆ ಮತ್ತು ಸಂಪಾದಕೀಯ ತಂಡಕ್ಕೆ ನನ್ನ ಹೃತ್ಪೂರ್ವಕ ಅಭಿನಂದನೆಗಳು ಹಾಗೂ ಕೃತಜ್ಞತೆಗಳು.

ನಮ್ಮ ಸಂಘದ ಏಕತೆ, ಸಹೋದರತ್ವ ಮತ್ತು ಪರಸ್ಪರ ಸಹಕಾರವನ್ನು ಇನ್ನಷ್ಟು ಬಲಪಡಿಸಿ, ಸದಸ್ಯರು ಅವರ ಕುಟುಂಬಗಳ ಕಲ್ಯಾಣಕ್ಕಾಗಿ ನಾವು ಒಗ್ಗಟ್ಟಿನಿಂದ ಮುಂದುವರಿಯೋಣ.

ಈ ಸ್ಮರಣ ಸಂಚಿಕೆಯು, ಎಲ್ಲರ ಮೆಚ್ಚುಗೆಗೆ ಪಾತ್ರವಾಗಲಿ ಮತ್ತು ನಮ್ಮ ಸಂಘದ ಹಾಗೂ ಸದಸ್ಯರ ಸ್ಮರಣೀಯ ಪಯಣದ ಶಾಶ್ವತ ದಾಖಲೆಯಾಗಿ ಉಳಿಯಲಿ ಎಂದು ಹಾರೈಸುತ್ತೇನೆ.

ಎಲ್ಲರಿಗೂ ನನ್ನ ಹೃತ್ಪೂರ್ವಕ ಶುಭಾಶಯಗಳು.

(ಕೆ.ಬಿ. ಬೆಟ್ಟೇಗೌಡ)

ಅಧ್ಯಕ್ಷರು